# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 587 |
| ಮಾನ್ಯ ಸದಸ್ಯರ ಹೆಸರು | : ಶ್ರೀ ನಿರಾಣಿ ಹಣವಂತ ರುದ್ರಪ್ಪ |
| ಉತ್ತರಿಸುವ ದಿನಾಂಕ | : 22.07.2024 |
| ಉತ್ತರಿಸುವ ಸಚಿವರು | : ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2024ನೇ ಸಾಲಿನಲ್ಲಿ ವೃತ್ತಿಪರ (ವೈದ್ಯಕೀಯ ಮತ್ತು ಇಂಜಿನಿಯರಿಂಗ್) ನಡೆಸಿದ ಕೆಸಿಇಟಿ ಪರೀಕ್ಷೆಯಲ್ಲಿ ನಿಗದಿತ ಪಠ್ಯಕ್ರಮದಿಂದ ಹೊರತಾದ ಹೆಚ್ಚಿನ ಪ್ರಶ್ನೆಗಳನ್ನು ಸೇರಿಸಿ ಪ್ರಶ್ನೆ ಪತ್ರಿಕೆ ತಯಾರಿಸಿ ಪರೀಕ್ಷೆ ನಡೆಸಿರುವುದು ನಿಜವೇ; | ಸರ್ಕಾರದ ಆದೇಶ ಸಂ:ಇಡಿ 173 ಟಿಇಸಿ 2024, ದಿನಾಂಕ:22.04.2024ರಲ್ಲಿ ವಿಷಯ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ:23.04.2024ರಂದು ನೀಡಿದ ವರದಿಯ ಪ್ರಕಾರ 2024ನೇ ಸಾಲಿನ ಸಿಇಟಿ ಪರೀಕ್ಷೆಯಲ್ಲಿ ನಾಲ್ಕು ವಿಷಯಗಳ ಒಟ್ಟು 50 ಪ್ರಶ್ನೆಗಳು (ಭೌತಶಾಸ್ತ್ರ-09, ರಸಾಯನ ಶಾಸ್ತ್ರ-15, ಗಣಿತ-15 ಮತ್ತು ಜೀವಶಾಸ್ತ್ರ-09) ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳನ್ನು ಕೇಳಲಾಗಿರುತ್ತದೆ. |
| ಆ | ಪಠ್ಯಕ್ರಮದ ಹೊರತಾದ ಹೆಚ್ಚಿನ ಪ್ರಶ್ನೆಗಳನ್ನು ಸೇರಿಸಿ ನಡೆಸಿರುವ ಪರೀಕ್ಷೆಯ ಎಡವಟ್ಟಿನಿಂದ ಮಕ್ಕಳಿಗೆ ಆದ ಅನ್ಯಾಯವನ್ನು ಸರಿಪಡಿಸಲು ಸರ್ಕಾರವು ವಹಿಸಿದ ಕ್ರಮಗಳೇನು; | ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ ಪ್ರಶ್ನೆಗಳಿಗೆ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಫಲಿತಾಂಶವನ್ನು ಪ್ರಕಟಿಸಲಾಗಿರುತ್ತದೆ.<br><br>ದಿನಾಂಕ:09.05.2024ರ ಆದೇಶದನ್ವಯ ಶ್ರೀ ಡಿ.ಎನ್.ನರಸಿಂಹರಾಜು, ಅಪರ ಮುಖ್ಯ ಕಾರ್ಯದರ್ಶಿಗಳು (ಭಾ.ಆ.ಸೇ., ನಿವೃತ್ತ) ಇವರ ಏಕ ಸದಸ್ಯ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ವಿಚಾರಣೆ ನಡೆಸಿ, ವರದಿ ನೀಡಿದ ನಂತರ ಪರಿಶೀಲಿಸಿ, ಅಗತ್ಯ ಕ್ರಮವಹಿಸಲಾಗುವುದು. |
| ಇ | ಪಠ್ಯಕ್ರಮದ ಹೊರತಾದ ಹೆಚ್ಚಿನ ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ಕೇಳುವುದು ತಪ್ಪಲ್ಲವೇ; ಎರಡು ವರ್ಷಗಳ ಕಾಲ ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳಿಗೆ ಸರ್ಕಾರವು ಅನ್ಯಾಯ ಮಾಡಿದಂತಾಗಿಲ್ಲವೇ; ತಪ್ಪು ನಡೆದಿರುವುದು ದೃಢಪಟ್ಟಿರುವುದು ಸರ್ಕಾರ ಕೈಗೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು) | |
| ಈ | ಈ ಅವ್ಯವಸ್ಥೆಗೆ ಮೂಲ ಕಾರಣಗಳೇನು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;(ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು) | |

| | | |
|---|---|---|
| ಉ | ತಳ ಸಮುದಾಯ, ರೈತಾಪಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಳ ವಿದ್ಯಾರ್ಥಿಗಳು ಉನ್ನತ ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣ ಪಡೆಯಲು ಸಹಕಾರಿಯಾಗಲೆಂದು ಸಿಇಟಿ ಶಿಕ್ಷಣ ಪಡೆಯಲು ಸಹಕಾರಿಯಾಗಲೆಂದು ಸಿಇಟಿ ಪರೀಕ್ಷೆಯೆಂಬ ವಿಧಾನವನ್ನು ಪ್ರಾರಂಭಿಸಿದ್ದು, ಇತ್ತೀಚಿನ ದಿನಗಳಲ್ಲಿ ಇದರ ನಿರ್ವಹಣೆಯಲ್ಲಿ ಉಂಟಾಗುತ್ತಿರುವ ಲೋಪದೋಷಗಳಿಂದ ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋಷಕರು ಬಹಳ ಆತಂಕದ ಪರಿಸ್ಥಿತಿಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು? | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸೀಟು ಹಂಚಿಕೆಯನ್ನು ಮೂರು ಸುತ್ತುಗಳಲ್ಲಿ ನಡೆಸಲಾಗುತ್ತಿದ್ದು, ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳ ಅನ್ವಯ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. ಯಾವುದೇ ವರ್ಗದ ಅಭ್ಯರ್ಥಿಗಳಿಗೆ ಅನ್ಯಾಯ ಆಗಿರುವುದಿಲ್ಲ. |

ಸಂ:ಇಡಿ 371 ಟಿಇಸಿ 2024

(ಡಾ.ಎಂ.ಸಿ.ಸುಧಾಕರ್)
**ಉನ್ನತ ಶಿಕ್ಷಣ ಸಚಿವರು**